ಶ್ರೀ ಅನಂತನಾಥ ಸ್ವಾಮಿ

॥ ಭ ॥ ಶ್ರೀ ಅನಂತನಾಥಾಯ ನಮಃ ॥
ಮಹಾಮಾತೆ ॥ ಶ್ರೀ ಪದ್ಮಾವತಿ ದೇವ್ಯೈ ನಮಃ ॥

ಪ್ರತಿಷ್ಠೆಗೊಳ್ಳಲಿರುವ ತ್ರಿಮೂರ್ತಿಗಳು

॥ ಭ ॥ ಶ್ರೀ ಆದಿನಾಥಾಯ ನಮಃ ॥
॥ ಭ ॥ ಶ್ರೀ ಭರತ ಕೇವಲಿ ಸ್ವಾಮಿನೇ ನಮಃ ॥
॥ ಭ ॥ ಶ್ರೀ ಬಾಹುಬಲಿ ಸ್ವಾಮಿನೇ ನಮಃ ॥

ಶ್ರೀ ಪದ್ಮಾವತಿ ದೇವಿ

ಪರಮ ಪೂಜ್ಯ ಆಚಾರ್ಯ ಶ್ರೀ ೧೦೮ ಸುದೇಶಸಾಗರ ಮುನಿಮಹಾರಾಜರು

ಅತಿಶಯ ಕ್ಷೇತ್ರ ಭಗವಾನ್ ಶ್ರೀ ಅನಂತನಾಥ ಸ್ವಾಮಿ ಬಸದಿ, ಶಿರ್ಲಾಲು

ಅಂಚೆ : ಹಾಡಿಯಂಗಡಿ - 574101, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

ಶ್ರೀಮುಖ ಪತ್ರಿಕೆ

ಸ್ವಸ್ತಿ ಶ್ರೀ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳು, ಕಾರ್ಕಳ

ಶ್ರೀ ಸಿದ್ಧಗಿರಿ ಕ್ಷೇತ್ರ ಭಗವಾನ್ ಶ್ರೀ ತೀರ್ಥಂಕರ ಆದಿನಾಥ ಸ್ವಾಮಿಯವರ ಪಂಚಕಲ್ಯಾಣ ಮಹೋತ್ಸವ ಮತ್ತು ಭಗವಾನ್ ಶ್ರೀ ಭರತ ಕೇವಲೀ ಮತ್ತು ಭಗವಾನ್ ಶ್ರೀ ಬಾಹುಬಲಿ ಕೇವಲೀ ಸ್ವಾಮಿಯ ಪ್ರತಿಷ್ಠಾಪನಾ ಮಹೋತ್ಸವ ಪೂರ್ವಕ ಮಹಾಮಸ್ತಕಾಭಿಷೇಕ ಮಹೋತ್ಸವ.

ಸ್ವ| ಆರ್. ಸಿದ್ದಪ್ಪ ಹೆಗ್ಡೆ ಮತ್ತು
ಸ್ವ| ಲಕ್ಷ್ಮೀಮತಿಯಮ್ಮ

ಶ್ರೀ ಎಸ್. ರತ್ನವರ್ಮ ಪೂವಣಿ ಮತ್ತು
ಶ್ರೀಮತಿ ವಿನಂತಿ, ಪ್ರತಿಷ್ಠಾಪಕರು

ಕನ್ನಡ ನಾಡಿನ ಸಾಹಿತ್ಯ, ಸಂಸ್ಕೃತಿ, ಶಿಲ್ಪಕಲೆಗಳ ಸಮೃದ್ಧಿಗೆ ಜೈನ ಧರ್ಮೀಯರ ಕೊಡುಗೆ ಅನನ್ಯವಾದುದು. ಆಚಾರ್ಯ ಜಿನಸೇನರೇ ಮೊದಲಾದ ಗುರುಗಳಿಂದ ಮೊದಲ್ಗೊಂಡು ಮಹಾನ್ ಕವಿಗಳಾದ ಪಂಪ, ರನ್ನ, ಜನ್ನ, ಪೊನ್ನ, ರತ್ನಾಕರವರ್ಣಿಯೇ ಮೊದಲಾದವರು ನೀಡಿದ ಕೊಡುಗೆ ಅನುಪಮವಾದುದು. ಇವರ ಮಹಾನ್ ಕಾವ್ಯಗಳಿಂದ ಪಸರಿಸಲ್ಪಟ್ಟ ಮೌಲ್ಯಗಳಿಂದ ಸುಸಂಸ್ಕೃತವಾದ ಪುಣ್ಯಭೂಮಿ ಕರ್ನಾಟಕ ಎಂಬುದು ಹೆಮ್ಮೆಯ ಸಂಗತಿ. ಈ ನೆಲದಲ್ಲಿ ಅಹಿಂಸೆಯ ಸಂಸ್ಕೃತಿಯನ್ನು ಸಮೃದ್ಧವಾಗಿ ಪಸರಿಸಿದ ಜೈನ ಸಮಾಜ, ಉದಾತ್ತ ಚಿಂತನೆಗಳ ನಿರಂತರ ಪೋಷಣೆಗಾಗಿ ಜೈನರು ಈ ಯುಗದ ಆದಿಯಿಂದಲೇ ಬೃಹತ್ ಮೂರ್ತಿಗಳನ್ನು ನಿರ್ಮಿಸಿ ಪೂಜಿಸಿದ ಉಲ್ಲೇಖಗಳಿವೆ. ಇದೇ ಪರಂಪರೆಯಲ್ಲಿ ನಿರ್ಮಾಣಗೊಂಡ ತೀರ್ಥಂಕರ ಹಾಗೂ ಕೇವಲೀ ಜಿನರುಗಳಾದ ಭರತ, ಬಾಹುಬಲಿಯರ ಅನೇಕ ಮೂರ್ತಿಗಳು ನಾಡಿನಾದ್ಯಂತ ನಮಗೆ ಕಾಣಸಿಗುತ್ತವೆ. ಕರ್ನಾಟಕದ ಇತಿಹಾಸವನ್ನು ಗಮನಿಸಿದರೆ ವಿಶ್ವವನ್ನು ಬೆರಗುಗೊಳಿಸಿದ ಭಗವಾನ್ ಶ್ರೀ ಬಾಹುಬಲಿಯ ಬೃಹತ್ ಮೂರ್ತಿಗಳನ್ನು ನಿರ್ಮಿಸಿ ಮಹಾಮಸ್ತಕಾಭಿಷೇಕಗಳನ್ನು ನೆರವೇರಿಸುತ್ತಾ ಬಂದಿರುವ ಹೆಗ್ಗಳಿಕೆ ನಮ್ಮದಾಗಿದೆ. ಚಾವುಂಡರಾಯ ಶ್ರವಣಬೆಳಗೊಳದಲ್ಲಿ, ಭೈರವರಸರು ಕಾರ್ಕಳದಲ್ಲಿ, ಅಜಿಲ ಅರಸರು ವೇಣೂರಿನಲ್ಲಿ, ಡಾ| ಡಿ. ವೀರೇಂದ್ರ ಹೆಗ್ಗಡೆಯವರು ಧರ್ಮಸ್ಥಳದಲ್ಲಿ ಭಗವಾನ್ ಬಾಹುಬಲಿಯ ಉನ್ನತ ಬಿಂಬಗಳನ್ನು ನಿರ್ಮಿಸಿ, ಪ್ರತಿಷ್ಠಾಪಿಸಿ ಧರ್ಮಪ್ರಭಾವನೆಗೆ ಭಾಜನರಾಗಿದ್ದಾರೆ. ಇದೀಗ ಅದೇ ಶ್ರೇಷ್ಠ ಪರಂಪರೆಯನ್ನು ಮುನ್ನಡೆಸುವ ಸ್ವ| ಧರ್ಮಾನುರಾಗಿ ಶ್ರೀ ಸಿದ್ದಪ್ಪ ಹೆಗ್ಡೆ ಮತ್ತು ಸ್ವ| ಶ್ರೀಮತಿ ಲಕ್ಷ್ಮೀಮತಿ ಅಮ್ಮ ದಂಪತಿಗಳ ಪುತ್ರರಾದ "ಶ್ರಾವಕ ಶ್ರೇಷ್ಠ" ಶ್ರೀ ರತ್ನವರ್ಮ ಪೂವಣಿ ಮತ್ತು ಧರ್ಮಪತ್ನಿ ಶ್ರೀಮತಿ ವಿನಂತಿಯವರು ಅವರ ಪೂಜ್ಯ ಮಾತಾಪಿತೃಗಳ ಶುಭ ಆಶಯದಂತೆ, ಅತಿಶಯ ಕ್ಷೇತ್ರ ಶಿರ್ಲಾಲಿನ ಪುಣ್ಯಭೂಮಿಯಲ್ಲಿ, ಭಗವಾನ್ ಶ್ರೀ ಅನಂತನಾಥ ಸ್ವಾಮಿ ಬಸದಿಯ ಪರಿಸರದಲ್ಲಿ 16 ಅಡಿ ಎತ್ತರದ ಬೆಳ್ಳಿರಥದ ನಿರ್ಮಾಣವೇ ಮೊದಲಾದ ಹಲವು ಅದ್ವಿತೀಯ ಸತ್ಕಾರ್ಯಗಳನ್ನು ಮಾಡಿದ ಇವರು, ಇದೀಗ 11 ಅಡಿ ಎತ್ತರದ ಭಗವಾನ್ ಶ್ರೀ ಆದಿನಾಥ ಸ್ವಾಮಿ, ಭಗವಾನ್ ಶ್ರೀ ಭರತ ಕೇವಲೀ ಸ್ವಾಮಿ, ಭಗವಾನ್ ಶ್ರೀ ಬಾಹುಬಲಿ ಕೇವಲೀ ಸ್ವಾಮಿಯವರ ಸುಂದರ ಶಿಲಾಮಯ ವಿಗ್ರಹಗಳನ್ನು ಪ್ರತಿಷ್ಠಾಪನೆಗೊಳಿಸುತ್ತಿದ್ದಾರೆ. ಒಂದೇ ಕಮಲಪೀಠದಲ್ಲಿ ಈ ಮೂರು ಜಿನಬಿಂಬಗಳನ್ನು ಸ್ಥಾಪಿಸಿ ದಿಗಂಬರ ಜೈನ ಆಗಮೋಕ್ತ ವಿಧಿ ವಿಧಾನಯುಕ್ತ ಪಂಚಕಲ್ಯಾಣಪೂರ್ವಕ ಪ್ರತಿಷ್ಠಾಪನಾ ಮಹೋತ್ಸವ ಮತ್ತು ಮಹಾಮಸ್ತಕಾಭಿಷೇಕ ಮಹೋತ್ಸವವು

ಪರಮ ಪೂಜ್ಯ ಆಚಾರ್ಯ ಶ್ರೀ ೧೦೮ ಸುದೇಶಸಾಗರ ಮುನಿಮಹಾರಾಜರ ಪಾವನ ಸಾನಿಧ್ಯ

ಸ್ವಸ್ತಿ ಶ್ರೀ ಮದ್‌ರಾಯ ರಾಜಗುರು ಭೂಮಂಡಲಾಚಾರ್ಯವರ್ಯ, ಮಹಾವಾದ ವಾದೀಶ್ವರರಾಯ, ವಾದಿಪಿತಾಮಹ, ಸಕಲ ವಿದ್ವಜ್ಜನ ಸಾರ್ವಭೌಮಾದ್ಯನೇಕ ಅನ್ವರ್ಥ ಬಿರುದಾವಳಿ ವಿರಾಜಮಾನರುಂ, ಶ್ರೀ ಮನ್ನಿಜ ಘಟಿಕಸ್ಥಾನ ಪನಸೋಗೆ, ವಂಗನಗರ, ಕಳಸ, ಕಾರ್ಕಳ ಚತುಃಸಿದ್ಧ ಸಿಂಹಾಸನಾಧೀಶ್ವರರಾದ

ಧ್ಯಾನಯೋಗಿ, ಸ್ವಸ್ತಿ ಶ್ರೀ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು, ಶ್ರೀ ಜೈನ ಮಠ, ಕಾರ್ಕಳ ಇವರ ಪಾವನ ಸಾನಿಧ್ಯ ಹಾಗೂ ದಿವ್ಯ ಅಧಿನೇತೃತ್ವದಲ್ಲಿ

ಸ್ವಸ್ತಿ ಶ್ರೀ ಮಹಾವೀರ ಶಕ ವರ್ಷ೨೫೩೯ ನಂದನ ನಾಮ ಸಂವತ್ಸರದ ಮಕರ ಮಾಸ ದಿನ ೨೮ ಸಲ್ಲುವ ಮಾಘ ಶುದ್ಧ ೧ಯು ದಿನಾಂಕ 11-2-2013 ಸೋಮವಾರದಿಂದ ದಿನಾಂಕ 21-2-2013 ಗುರುವಾರ ಪರ್ಯಂತ ಜರಗಲಿರುವುದು.

11 ದಿನಗಳ ಪರ್ಯಂತ ಪಂಚಕಲ್ಯಾಣ ಪೂರ್ವಕ ಜರಗುವ ಪೂಜಾ ಕಾರ್ಯಕ್ರಮಗಳು

ದಿನಾಂಕ 11-2-2013 ಸೋಮವಾರ : ದಿವಾ ಗಂಟೆ 12-41ರಿಂದ 1-10ರ ತನಕ ಒದಗುವ ವೃಷಭ ಲಗ್ನದಲ್ಲಿ ಯಜಮಾನ ಪ್ರತಿಷ್ಠೆ, ಇಂದ್ರ ಪ್ರತಿಷ್ಠೆ, ಕಂಕಣ ಬಂಧನ. ಮಹಾ ಸಂಕಲ್ಪದೊಂದಿಗೆ ಸಾಮೂಹಿಕ ದೇವತಾ ಪ್ರಾರ್ಥನೆ. ಮಧ್ಯಾಹ್ನ ಗಂಟೆ 1-30ರ ವೃಷಭ ಲಗ್ನದಲ್ಲಿ ತೋರಣ ಮುಹೂರ್ತ. ಬಸದಿಯಲ್ಲಿ ಭಗವಾನ್ ಶ್ರೀ ಅನಂತನಾಥ ಸ್ವಾಮಿಗೆ ಪಂಚಾಮೃತ ಅಭಿಷೇಕ. ಶ್ರೀ ಸಿದ್ಧಗಿರಿ ಕ್ಷೇತ್ರದಲ್ಲಿ ವಿಮಾನಶುದ್ಧಿ ಹೋಮ ವಿಧಾನ, ನಾಂದಿ ಮಂಗಲ. ಮಹಾಮಂಗಲಾರತಿ.

ಪೂಜಾ ಸೇವಾರ್ಥಿಗಳು : ಸ್ವ| ನಿಟ್ಟೆ ಬಿಜಕಳ ರವಿರಾಜ ಅತಿಕಾರಿ ಮತ್ತು ಅಜೆಕಾರು ನಡಿಮಾರು ಸ್ವ| ಶ್ರೀಮತಿ ಹೆಗ್ಗಡ್ತಿಯವರ ಮಕ್ಕಳಾದ ಶ್ರೀ ಹರಿಶ್ಚಂದ್ರ ಹೆಗ್ಡೆ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಶಾಲಿನಿ ಮತ್ತು ಮಕ್ಕಳು, ನಡಿಮಾರುಗುತ್ತು. ಶ್ರೀಮತಿ ವಿಜಯ ಮತ್ತು ಶ್ರೀ ಯುವರಾಜ ನಾಯ್ಕ ಮತ್ತು ಮಕ್ಕಳು, ಹೆಕ್ಕಡ್ಕ. ಶ್ರೀಮತಿ ಶಕುಂತಳಾ ಮತ್ತು ಶ್ರೀ ಉದಂಗರ ಮತ್ತು ಮಕ್ಕಳು, ಬೆಳ್ತಂಗಡಿ. ಶ್ರೀಮತಿ ವನಿತಾ ಮತ್ತು ಮಕ್ಕಳು, ಬುಳೆಕ್ಕಾರ್ ಕೊಕ್ರಾಡಿ.
ಶ್ರೀ ಪುಷ್ಪರಾಜ ಮತ್ತು ಶ್ರೀಮತಿ ಶರ್ಮಿಳಾ ಮತ್ತು ಮಕ್ಕಳು, ನಡಿಮಾರುಗುತ್ತು. ಶ್ರೀ ಜಯರಾಜ ಮತ್ತು ಶ್ರೀಮತಿ ಮಲ್ಲಿಕಾ ಮತ್ತು ಮಕ್ಕಳು, ನಡಿಮಾರುಗುತ್ತು. ಶ್ರೀಮತಿ ಸುಜಾತ ಮತ್ತು ಶ್ರೀ ಡಾ| ಚಂದ್ರಪ್ರಭ ಮತ್ತು ಮಕ್ಕಳು, ಮೈಸೂರು. ಶ್ರೀಮತಿ ಸುಜಯ ಮತ್ತು ಶ್ರೀ ಶ್ರೀಪ್ರಕಾಶ್ ಮತ್ತು ಮಕ್ಕಳು, ಜಂಕಳ, ಸಿದ್ಧಕಟ್ಟೆ.

ದಿನಾಂಕ 12-2-2013 ಮಂಗಳವಾರ : ಪ್ರಾತಃ ಗಂಟೆ 7-30ರಿಂದ ಬಸದಿಯಲ್ಲಿ ಭಗವಾನ್ ಶ್ರೀ ಅನಂತನಾಥ ಸ್ವಾಮಿಗೆ ಪಂಚಾಮೃತ ಅಭಿಷೇಕ. ಪ್ರಾತಃ ಗಂಟೆ 8-30ರಿಂದ ಶ್ರೀ ಆದಿನಾಥ ಸ್ವಾಮಿ ಸನ್ನಿಧಿಯಲ್ಲಿ ವಾಸ್ತು ಪೂಜಾ ವಿಧಾನ ಮತ್ತು ನವಗ್ರಹ ಮಹಾ ಶಾಂತಿ ಹಾಗೂ ದಿಕ್ಪಾಲಕ ಪೂಜಾ ವಿಧಾನ. ಮಧ್ಯಾಹ್ನ ಗಂಟೆ 3-00ರಿಂದ ಬಿಂಬ ಶುದ್ಧಿ ವಿಧಾನ. ಮಹಾಮಂಗಲಾರತಿ.

ಪೂಜಾ ಸೇವಾರ್ಥಿಗಳು : ನಲ್ಲೂರು ಮೂಡುಕೋಡಿ ಸ್ವ| ಧರ್ಮರಾಜ ಪೂವಣಿ ಮತ್ತು ಅತ್ತೋಡಿಗುತ್ತು ಸ್ವ| ಕಮಲಾವತಿ ಅಮ್ಮನವರ ಪುತ್ರ ವ, ಮೂಡಾಯೂರುಗುತ್ತು ಸ್ವ| ಭೋಜರಾಜ ಪಡಿವಾಳರ ಅಳಿಯ ಶ್ರೀ ಎ. ಪ್ರಸನ್ನ ಕುಮಾರ್ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಸುವರ್ಣಲತಾ, ಪ್ರಸನ್ನಲತಾ, ಹಳೆಕೋಟೆ, ಬೆಳ್ತಂಗಡಿ.

ದಿನಾಂಕ 13-2-2013 ಬುಧವಾರ : ಪ್ರಾತಃ ಗಂಟೆ 7-30ರಿಂದ ಬಸದಿಯಲ್ಲಿ ಭಗವಾನ್ ಶ್ರೀ ಅನಂತನಾಥ ಸ್ವಾಮಿಗೆ ಪಂಚಾಮೃತ ಅಭಿಷೇಕ. ಮೃತ್ತಿಕಾ ಸಂಗ್ರಹ. ಪ್ರಾತಃ ಗಂಟೆ 8-15ರ ಕುಂಭ ಲಗ್ನದಲ್ಲಿ ತೋರಣ ಮುಹೂರ್ತದೊಂದಿಗೆ ಪಂಚಕಲ್ಯಾಣ ಮಂಟಪ ಪ್ರವೇಶ. ಅಂಕುರಾರ್ಪಣೆ. ಯಕ್ಷಾರಾಧನಾ ಪೂರ್ವಕ ಯಕ್ಷ ಪ್ರತಿಷ್ಠೆ. ದಿವಾ ಗಂಟೆ 12-17ರ ವೃಷಭ ಲಗ್ನದಲ್ಲಿ ಧ್ವಜಾರೋಹಣ. ಅಪರಾಹ್ನ ಗಂಟೆ 3-00ರಿಂದ ಶ್ರೀ ಪೀಠ ಯಂತ್ರಾರಾಧನಾ ವಿಧಾನ. ಸಂಜೆ ಗಂಟೆ 7-00ರಿಂದ ಧ್ವಜಕಟ್ಟೆಯಲ್ಲಿ ಪೂಜೆ. ಭೇರಿತಾಡನ ವಿಧಾನ, ಶ್ರೀಬಲಿ ವಿಧಾನ, ಉತ್ಸವ. ಮಹಾಮಂಗಲಾರತಿ.

ಪೂಜಾ ಸೇವಾರ್ಥಿಗಳು : ಶಿರ್ಲಾಲು ಬೆಟ್ಟುಕಂಬಳ ಸ್ವ| ಭೋಜ ಮುದ್ಯರ ಪತ್ನಿ ಶ್ರೀಮತಿ ರತಿದೇವಿ ಅಮ್ಮ ಮತ್ತು ಮಕ್ಕಳು ಮತ್ತು ಕುಟುಂಬಸ್ಥರು. ಶ್ರೀಮತಿ ಅನಿಲ ಮತ್ತು ಶ್ರೀ ಶಾಂತಿರಾಜ ಜೈನ್ ಮತ್ತು ಮಗ, ಆಶ್ರಿತ, ಶಿರ್ಲಾಲು. ಮುಡಾರು ಹಲೆಕ್ಕಿ ಶ್ರೀಮತಿ ಲಲಿತ ಮತ್ತು ಶ್ರೀ ನಾಭಿರಾಜ ಹೆಗ್ಡೆ ಮತ್ತು ಮಕ್ಕಳು.

ದಿನಾಂಕ 14-2-2013 ಗುರುವಾರ : ಪ್ರಾತಃ ಗಂಟೆ 7-30ರಿಂದ ಬಸದಿಯಲ್ಲಿ ಭಗವಾನ್ ಶ್ರೀ ಅನಂತನಾಥ ಸ್ವಾಮಿಗೆ ಪಂಚಾಮೃತ ಅಭಿಷೇಕ. ನಿತ್ಯವಿಧಿ ಸಹಿತ ಪಂಚಕಲ್ಯಾಣ ಮಂಟಪದಲ್ಲಿ ಹೋಮ ವಿಧಾನ. ಧ್ವಜಕಟ್ಟೆಯಲ್ಲಿ ಪೂಜೆ, ಶ್ರೀ ಬಲಿ ವಿಧಾನ. ದಿವಾ ಗಂಟೆ 10-00ರಿಂದ ಗ್ರಹಯಜ್ಞ ವಿಧಾನ. ಮಧ್ಯಾಹ್ನ ಗಂಟೆ 2-00ರಿಂದ ಬೃಹಚ್ಛಾಂತಿ ಯಂತ್ರಾರಾಧನಾ ವಿಧಾನ. ಸಂಜೆ ಗಂಟೆ 5-35ರ ಕರ್ಕಾಟಕ ಲಗ್ನದಲ್ಲಿ **ಐತಿಹಾಸಿಕ ಚಾರಿತ್ರಿಕವಾದ 11 ಅಡಿ ಎತ್ತರದ ಭಗವಾನ್ ಶ್ರೀ ತೀರ್ಥಂಕರ ಆದಿನಾಥ ಸ್ವಾಮಿ, ಭಗವಾನ್ ಶ್ರೀ ಭರತ ಕೇವಲೀ ಮತ್ತು ಭಗವಾನ್ ಶ್ರೀ ಬಾಹುಬಲಿ ಕೇವಲೀ ಸ್ವಾಮಿ ಜಿನಬಿಂಬಗಳ ದಿವ್ಯದರ್ಶನ ಮತ್ತು ಶ್ರೀ ಸಿದ್ಧಗಿರಿ ಕ್ಷೇತ್ರದ ಲೋಕಾರ್ಪಣೆ.** ಮಹಾಮಂಗಲಾರತಿ.

ಪೂಜಾ ಸೇವಾರ್ಥಿಗಳು : ಶ್ರೀಮತಿ ಮತ್ತು ಶ್ರೀ ಧರ್ಮರಾಜ ಹೆಗ್ಡೆ ಮತ್ತು ಕುಟುಂಬಸ್ಥರು, ಆಯರೆ ಹೊಸಮನೆ, ಶಿರ್ಲಾಲು. ಶ್ರೀಮತಿ ಮತ್ತು ಶ್ರೀ ಎನ್. ಎ. ನಾಗರಾಜ ಅಮ್ಮ ಮತ್ತು ಮಕ್ಕಳು, ಕೊಲ್ಲಂಗುಲಿ ಮನೆ, ಜಾರ್ಕಳ ಮುಂಡ್ಲಿ.
ಶ್ರೀಮತಿ ಮತ್ತು ಶ್ರೀ ಕೆ. ಪದ್ಮರಾಜ ಅಮ್ಮ ಮತ್ತು ಮಕ್ಕಳು, ಬಿಜರಬೆಟ್ಟು ಮನೆ, ಜಾರ್ಕಳ ಮುಂಡ್ಲಿ. ಶ್ರೀಮತಿ ಇಂದಿರಾವತಿ ಅಮ್ಮ ಮತ್ತು ಮಕ್ಕಳು, ಅಗ್ಗಬೆಟ್ಟು ಮನೆ, ಜಾರ್ಕಳ ಮುಂಡ್ಲಿ. ಶ್ರೀಮತಿ ಮತ್ತು ಶ್ರೀ ಭುಜಬಲಿ ಮುದ್ಯ ಮತ್ತು ಮಕ್ಕಳು, ಶ್ರೀಮಾತಾ, ಶಿರ್ಲಾಲು. ಶ್ರೀಮತಿ ಸುಶೀಲಮ್ಮ ಮತ್ತು ಮಕ್ಕಳು, ಪಂಡಿತಬೆಟ್ಟು ಮನೆ, ಶಿರ್ಲಾಲು. ಶ್ರೀಮತಿ ಮತ್ತು ಶ್ರೀ ಜಿನರಾಜೇಂದ್ರ ಮತ್ತು ಮಕ್ಕಳು, ಹೊಸಕೆರೆ, ನರಸಿಂಹರಾಜಪುರ. ಶ್ರೀಮತಿ ಮತ್ತು ಶ್ರೀ ಜಿನರಾಜ ಅತಿಕಾರಿ ಮತ್ತು ಮಕ್ಕಳು, ಸರಸ್ವತಿ ನಿಲಯ, ಮುಚ್ಚಾರು. ಶ್ರೀಮತಿ ಮತ್ತು ಶ್ರೀ ಸಂಪತ್‌ಕುಮಾರ್ ಮತ್ತು ಕುಟುಂಬಸ್ಥರು, ಪದ್ಮಪ್ರಿಯ, ಕಡ್ತಲ. ಶ್ರೀಮತಿ ಮತ್ತು ಶ್ರೀ ಸೇವಾ ವಜ್ರಕುಮಾರ್ ಮಲ್ಲ ಮತ್ತು ಮಕ್ಕಳು, ಕುರ್ಪಾಡಿಗುತ್ತು.

ದಿನಾಂಕ 15-2-2013 ಶುಕ್ರವಾರ : ಪ್ರಾತಃ ಗಂಟೆ 7-30ರಿಂದ ಬಸದಿಯಲ್ಲಿ ಭಗವಾನ್ ಶ್ರೀ ಅನಂತನಾಥ ಸ್ವಾಮಿಗೆ ಪಂಚಾಮೃತ ಅಭಿಷೇಕ. ಪಂಚಕಲ್ಯಾಣ ಮಂಟಪದಲ್ಲಿ ನಿತ್ಯ ವಿಧಿ ಸಹಿತ ಹೋಮ ವಿಧಾನ. ಬೆಳಿಗ್ಗೆ ಗಂಟೆ 9-00ರಿಂದ ಧ್ವಜಕಟ್ಟೆಯಲ್ಲಿ ಪೂಜೆ ಮತ್ತು ಶ್ರೀ ಬಲಿ ವಿಧಾನ. ದಿವಾ ಗಂಟೆ 10-00ರಿಂದ ಬೃಹತ್ ಯಾಗ ಮಂಡಲ ಆರಾಧನಾ ವಿಧಾನ, ವೇದಿ ಪ್ರತಿಷ್ಠೆ, ಮಂಟಪ ಪ್ರತಿಷ್ಠೆ. ಸಂಜೆ ಗಂಟೆ 6-30ರಿಂದ ಅಷ್ಟದಿಕ್ಕನ್ಯೆಯರೊಂದಿಗೆ ಜಲಯಾತ್ರಾ ಮಹೋತ್ಸವ. ಮಾತುರಾಹ್ವಾನಾದಿ ಕ್ರಿಯಾಯುಕ್ತ ಗರ್ಭಾವತರಣ ಕಲ್ಯಾಣ. ಜಿನಮಾತೆಗೆ ಸೀಮಂತ. ಮಹಾಮಂಗಲಾರತಿ.

ಪೂಜಾ ಸೇವಾರ್ಥಿಗಳು : ಕೆರ್ವಾಶೆ ಹಿರೆ ಬಸದಿ ಸ್ವ| ಅಪ್ಪು ಯಾನೆ ಬಾಬಣ್ಣ ಇಂದ್ರ ಮತ್ತು ಸ್ವ| ಸರಸ್ವತಿ ಅಮ್ಮ ಅವರ ಪುತ್ರ ಶ್ರೀ ಸಿಂಹಸೇನ ಇಂದ್ರ ಮತ್ತು ಸಹೋದರ, ಸಹೋದರಿಯರು ಹಾಗೂ ಕುಟುಂಬಸ್ಥರು, ಕೆರ್ವಾಶೆ.

ದಿನಾಂಕ 16-2-2013 ಶನಿವಾರ : ಪ್ರಾತಃ ಗಂಟೆ 6-05ರ ಮಕರ ಲಗ್ನದಲ್ಲಿ ಭಗವಂತನ ಜನನ, ಲಘು ಜನ್ಮಾಭಿಷೇಕ, ದರ್ಭಶಯನ ಪಂಚಕಲ್ಯಾಣ ಮಂಟಪದಲ್ಲಿ ನಿತ್ಯವಿಧಿ ಸಹಿತ ಹೋಮ ವಿಧಾನ. ಪ್ರಾತಃ ಗಂಟೆ 7-30ರಿಂದ ಬಸದಿಯಲ್ಲಿ ಭಗವಾನ್ ಶ್ರೀ ಅನಂತನಾಥ ಸ್ವಾಮಿಗೆ ಪಂಚಾಮೃತ ಅಭಿಷೇಕ. ಬೆಳಿಗ್ಗೆ ಗಂಟೆ 9-00ರಿಂದ ಶ್ರೀ ಆದಿನಾಥ ಸ್ವಾಮಿ ಸನ್ನಿಧಿಯಲ್ಲಿ ಅಷ್ಟದಿಕ್ಷುಧಾಮ ಸಂಪ್ರೋಕ್ಷಣೆ, ಚತುರ್ದಿಕ್ಷು ಹೋಮ. ಸಂಜೆ ಗಂಟೆ 4-15ರ ಕರ್ಕಾಟಕ ಲಗ್ನದಲ್ಲಿ ಪಾಂಡುಕಾವನದಲ್ಲಿ ಜನ್ಮಾಭಿಷೇಕ. ರಾತ್ರಿ ಗಂಟೆ 8-00ರಿಂದ ನಾಮಕರಣ, ಬಾಲಲೀಲೋತ್ಸವ, ಕುಮಾರ ಕ್ರೀಡಾ ಇತ್ಯಾದಿ. ಮಹಾಮಂಗಲಾರತಿ.

ಪೂಜಾ ಸೇವಾರ್ಥಿಗಳು : ಶಿರ್ಲಾಲು ಬುಡ್ಡುಗುತ್ತು ಸ್ವ| ದೇಜಪ್ಪ ಹೆಗ್ಡೆ ಮತ್ತು ಸ್ವ| ಅನಂತಮತಿ ದಂಪತಿಗಳ ಪುತ್ರ ಶ್ರೀ ಗುಣಪಾಲ ಹೆಗ್ಡೆ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಮಾಲಾ ಹೆಗ್ಡೆ, ಮಗಳು ದೀಕ್ಷಾ ಉಜ್ವಲ್‌ಪ್ರಕಾಶ್, ಬೆಳಗಾಂ.
ಷಾ| ರುಕಪ್‌ಚಂದ್ ಸಿಂಘವಿ ಮತ್ತು ಶ್ರೀದೇವಿ ಬಾಯಿ ದಂಪತಿಗಳ ಮಕ್ಕಳಾದ ಜಯರಾಜ, ರಾಮಲಾಲ್, ಶಾಂತಿಲಾಲ್, ಮನೋಜ್ ಕುಮಾರ್ ಮತ್ತು ಕುಟುಂಬಸ್ಥರು, ಡಿ. ಎಂ. ಟ್ರೇಡರ್ಸ್, ಕಂಪ್ಲಿ, ಬಳ್ಳಾರಿ ಜಿಲ್ಲೆ. ರಾಜಸ್ಥಾನ ರಾಖೀ (ರಾಖೀವಾಲಾ)

ದಿನಾಂಕ 17-2-2013 ಭಾನುವಾರ : ಪ್ರಾತಃ ಗಂಟೆ 7-30ರಿಂದ ಬಸದಿಯಲ್ಲಿ ಭಗವಾನ್ ಶ್ರೀ ಅನಂತನಾಥ ಸ್ವಾಮಿಗೆ ಪಂಚಾಮೃತ ಅಭಿಷೇಕ. ಪಂಚಕಲ್ಯಾಣ ಮಂಟಪದಲ್ಲಿ ನಿತ್ಯವಿಧಿ ಸಹಿತ ಹೋಮ ವಿಧಾನ. ಧ್ವಜಕಟ್ಟೆಯಲ್ಲಿ ಪೂಜೆ, ಶ್ರೀಬಲಿ ವಿಧಾನ. ಬೆಳಿಗ್ಗೆ ಗಂಟೆ 9-00ರಿಂದ ಗಣಧರ ವಲಯ ಯಂತ್ರಾರಾಧನಾ ವಿಧಾನ. ಮಧ್ಯಾಹ್ನ ಗಂಟೆ 2-00 ರಿಂದ ಸಾಮ್ರಾಜ್ಯ ವೈಭವ, ರಾಜ್ಯಭಾರ, ನೀಲಾಂಜನಾ ನೃತ್ಯ ವೈಭವ, ವೈರಾಗ್ಯ ಪೂರ್ವಕ ದೀಕ್ಷಾವಿಧಿ ಸಹಿತ ಪರಿನಿಷ್ಕ್ರಮಣ ಕಲ್ಯಾಣ (ಶ್ರೀ ಆದಿನಾಥ ಸ್ವಾಮಿ ಭರತ ಸ್ವಾಮಿ ಮತ್ತು ಬಾಹುಬಲಿ ಸ್ವಾಮಿಗೆ) ಮಹಾಮಂಗಲಾರತಿ.

ಪೂಜಾ ಸೇವಾರ್ಥಿಗಳು : ಸ್ವ| ಆರ್. ಸಿದ್ದಪ್ಪ ಹೆಗ್ಡೆ ಮತ್ತು ಸ್ವ| ಲಕ್ಷ್ಮೀಮತಿಯಮ್ಮನವರ ಪುತ್ರ ಶಿರ್ಲಾಲು ದೊಡ್ಡಮನೆ ಶ್ರೀ ಜಗತ್ಪಾಲ ಪೂವಣಿ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಪ್ರೇಮ ಮತ್ತು ಮಕ್ಕಳು.

ದಿನಾಂಕ 18-2-2013 ಸೋಮವಾರ : ಪ್ರಾತಃ ಗಂಟೆ 7-30ರಿಂದ ಬಸದಿಯಲ್ಲಿ ಭಗವಾನ್ ಶ್ರೀ ಅನಂತನಾಥ ಸ್ವಾಮಿಗೆ ಪಂಚಾಮೃತ ಅಭಿಷೇಕ, ಪಂಚಕಲ್ಯಾಣ ಮಂಟಪದಲ್ಲಿ ನಿತ್ಯವಿಧಿ ಸಹಿತ ಹೋಮ ವಿಧಾನ. ಧ್ವಜ ಕಟ್ಟೆಯಲ್ಲಿ ಪೂಜೆ, ಶ್ರೀಬಲಿ ವಿಧಾನ. ಪ್ರಾತಃ ಗಂಟೆ 7-00ರಿಂದ 3 ಜನ ಜಿನ ಮುನಿಗಳಿಗೆ ಆಹಾರದಾನ. ಗಂಧ ಯಂತ್ರಾರಾಧನಾ ಪೂರ್ವಕ ಮಂತ್ರನ್ಯಾಸ, ತಿಲಕನ್ಯಾಸ ಸಹಿತ ಕೇವಲಜ್ಞಾನ ಕಲ್ಯಾಣ ಮತ್ತು ದಿವಾ ಗಂಟೆ 12-32ರಿಂದ 12-46ರ ತನಕ ನಡೆಯುವ ವೃಷಭ ಲಗ್ನದಲ್ಲಿ ನಯನೋನ್ಮೀಲನ ಪೂರ್ವಕ ಸ್ವಾಮಿ ಪ್ರತಿಷ್ಠೆ. ಶಿಖರಾರೋಹಣ. ಮಧ್ಯಾಹ್ನ ಗಂಟೆ 2-00ರಿಂದ ಸಮವಸರಣ ಪೂಜೆ, ಸಂಜೆ ಗಂಟೆ 5-00ರಿಂದ ಅಗ್ನಿತ್ರಯಾರ್ಚನಾ ಪೂರ್ವಕ ನಿರ್ವಾಣ ಕಲ್ಯಾಣ. ಸಿದ್ಧಚಕ್ರ ಯಂತ್ರಾರಾಧನಾ ವಿಧಾನ. ಅಗ್ರೋದಕ ಮೆರವಣಿಗೆ, ೧೦೦೮ ಕಲಶಗಳಿಂದ ಮಹಾಮಸ್ತಕಾಭಿಷೇಕ. ಮಹಾಮಂಗಲಾರತಿ.

ಪೂಜಾ ಸೇವಾರ್ಥಿಗಳು : ಸ್ವ| ಆರ್. ಸಿದ್ದಪ್ಪ ಹೆಗ್ಡೆ ಮತ್ತು ಸ್ವ| ಲಕ್ಷ್ಮೀಮತಿಯಮ್ಮನವರ ಪುತ್ರ ಪ್ರತಿಷ್ಠಾಪಕರಾದ ಮೂಡುಬಿದಿರೆ ಶ್ರೀ ಎಸ್. ರತ್ನವರ್ಮ ಪೂವಣಿ ಮತ್ತು ಅವರ ಧರ್ಮಪತ್ನಿ ಶ್ರೀಮತಿ ವಿನಂತಿ ಮತ್ತು ಅವರ ಮಕ್ಕಳು ಡಾ| ಮಹಾವೀರ್ ಜೈನ್, ಡಾ| ಶ್ವೇತಾ ಮತ್ತು ಅಳಿಯ ಡಾ| ಪ್ರದೀಪ್ ಮತ್ತು ಕುಟುಂಬಸ್ಥರು.

ದಿನಾಂಕ 19-2-2013 ಮಂಗಳವಾರ : ಪ್ರಾತಃ ಗಂಟೆ 7-30ರಿಂದ ಬಸದಿಯಲ್ಲಿ ಭಗವಾನ್ ಶ್ರೀ ಅನಂತನಾಥ ಸ್ವಾಮಿಗೆ ಪಂಚಾಮೃತ ಅಭಿಷೇಕ, ಪಂಚಕಲ್ಯಾಣ ಮಂಟಪದಲ್ಲಿ ನಿತ್ಯವಿಧಿ ಸಹಿತ ಹೋಮ ವಿಧಾನ. ಪ್ರಾತಃ ಗಂಟೆ 9-00ರಿಂದ ಶ್ರೀ ಆದಿನಾಥ ಸ್ವಾಮಿ ಸನ್ನಿಧಿಯಲ್ಲಿ ಬೃಹತ್ ಚವ್ವೀಸ್ ತೀರ್ಥಂಕರರ ಆರಾಧನಾ ವಿಧಾನ. ಅಗ್ರೋದಕ ಮೆರವಣಿಗೆ. ೧೦೦೮ ಕಲಶಗಳಿಂದ ಮಹಾಮಸ್ತಕಾಭಿಷೇಕ ಮಹಾಪೂಜೆ. ಮಹಾಮಂಗಲಾರತಿ.

ಪೂಜಾ ಸೇವಾರ್ಥಿಗಳು : ಶ್ರೀಮತಿ ಅರುಣ ಮತ್ತು ಶ್ರೀ ಎಂ. ಎನ್. ರಾಜೇಂದ್ರ ಕುಮಾರ್ ಮತ್ತು ಕುಟುಂಬಸ್ಥರು, ಕುಸುಮ, ಪುಲ್ಕೇರಿ ಕಾರ್ಕಳ. ಶ್ರೀಮತಿ ಕವಿತ ಮತ್ತು ಶ್ರೀ ಪುಷ್ಪರಾಜ ಜೈನ್, ಮತ್ತು ಕುಟುಂಬಸ್ಥರು, ಅಭೀಷ್ ಬಿಲ್ಡರ್ಸ್, ಮಂಗಳೂರು.

ದಿನಾಂಕ 20-2-2013 ಬುಧವಾರ : ಪ್ರಾತಃ ಗಂಟೆ 9-00ರಿಂದ ಬಸದಿಯಲ್ಲಿ ಭಗವಾನ್ ಶ್ರೀ ಅನಂತನಾಥ ಸ್ವಾಮಿಗೆ ಪಂಚಾಮೃತ ಅಭಿಷೇಕ. ಪಂಚಕಲ್ಯಾಣ ಮಂಟಪದಲ್ಲಿ ನಿತ್ಯವಿಧಿ ಸಹಿತ ಹೋಮ ವಿಧಾನ. ಭಕ್ತಾಮರ ಯಂತ್ರಾರಾಧನಾ ವಿಧಾನ.

ಮಹಾಮಸ್ತಕಾಭಿಷೇಕದ ಪ್ರಥಮ ಕಲಶಾಭಿಷೇಕ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ| ಡಿ. ವೀರೇಂದ್ರ ಹೆಗ್ಗಡೆಯವರು ಮತ್ತು ಕುಟುಂಬಸ್ಥರಿಂದ.

೧೦೦೮ ಕಲಶಗಳಿಂದ ಮಹಾಮಸ್ತಕಾಭಿಷೇಕ. ಮಹಾಮಂಗಲಾರತಿ. ಪ್ರಸಾದ ವಿತರಣೆ.

ಪೂಜಾ ಸೇವಾರ್ಥಿಗಳು : ಪ್ರತಿಷ್ಠಾ ಮಹೋತ್ಸವ ಮತ್ತು ಮಹಾಮಸ್ತಕಾಭಿಷೇಕ ಸಮಿತಿ ಮತ್ತು ಸಮಸ್ತ ಶ್ರಾವಕ ಬಂಧುಗಳು.

ದಿನಾಂಕ 21-2-2013 ಗುರುವಾರ : ಪ್ರಾತಃ ಗಂಟೆ 9-00ರಿಂದ ಬಸದಿಯಲ್ಲಿ ಭಗವಾನ್ ಶ್ರೀ ಅನಂತನಾಥ ಸ್ವಾಮಿಗೆ ಕ್ಷೀರಾಭಿಷೇಕ ಪೂಜೆ. ಶ್ರೀ ಆದಿನಾಥ ಸ್ವಾಮಿಗೆ ಪಾದಾಭಿಷೇಕ, ಕುಂಕುಮೋತ್ಸವ, ಅವಭೃತ ಸ್ನಾನ, (ಓಕುಳಿ), ಧ್ವಜಾವರೋಹಣ, ಸಂಘಪೂಜೆ, ಅಂಕುರ ವಿಸರ್ಜನೆ, ಕಂಕಣ ವಿಸರ್ಜನೆ ಮತ್ತು ಮಹಾಪ್ರಸಾದ.

ಪೂಜಾ ಸೇವಾರ್ಥಿಗಳು : ಪ್ರತಿಷ್ಠಾ ಮಹೋತ್ಸವ ಮತ್ತು ಮಹಾಮಸ್ತಕಾಭಿಷೇಕ ಸಮಿತಿ ಮತ್ತು ಸಮಸ್ತ ಶ್ರಾವಕ ಬಂಧುಗಳು.

ವಾಸ್ತು, ಜ್ಯೋತಿಷ್ಯ ಮಾರ್ಗದರ್ಶನ : ವಾಸ್ತು ತಜ್ಞ ಪ್ರೊ| ಸುದರ್ಶನ ಕುಮಾರ್ ಇಂದ್ರ, ಮೂಡುಬಿದಿರೆ. ಪ್ರತಿಷ್ಠಾಚಾರ್ಯರು : ಪುರೋಹಿತ ರತ್ನ ಶ್ರೀ ಕೆ. ವರ್ಧಮಾನ ಇಂದ್ರ, ಕಾರ್ಕಳ. ಸ್ಥಳ ಪುರೋಹಿತರು : ಶ್ರೀ ಶ್ರೀಕಾಂತ ಇಂದ್ರ ಮತ್ತು ಸಹ ಪುರೋಹಿತ ವರ್ಗ.

ಈ ಮೇಲಿನಂತೆ ಧಾರ್ಮಿಕ ವಿಧಿವಿಧಾನಗಳೊಂದಿಗೆ ಪಂಚಕಲ್ಯಾಣ ಮಹೋತ್ಸವವು ಸಂಪನ್ನಗೊಳ್ಳಲಿರುವುದರಿಂದ ಧರ್ಮಬಂಧುಗಳಾದ ತಾವೆಲ್ಲರೂ ಭಾಗವಹಿಸಿ, ಪುಣ್ಯಭಾಗಿಗಳಾಗಬೇಕಾಗಿ ಅಪೇಕ್ಷಿಸುತ್ತೇವೆ.

ಶ್ರೀ ಎಸ್. ರತ್ನವರ್ಮ ಪೂವಣಿ
ಅಧ್ಯಕ್ಷರು, ಆಡಳಿತ ಮಂಡಳಿ ಮತ್ತು ಮಹಾಮಸ್ತಕಾಭಿಷೇಕ ಸಮಿತಿ

ಶ್ರೀ ಕೆ. ಗುಣಪಾಲ ಕಡಂಬ
ಪ್ರಧಾನ ಕಾರ್ಯದರ್ಶಿ

ಶ್ರೀ ಎಸ್. ಅನಂತರಾಜ ಪೂವಣಿ
ಸಂಚಾಲಕರು

ಶ್ರೀ ಎಂ. ಎನ್. ರಾಜೇಂದ್ರ ಕುಮಾರ್
ಕಾರ್ಯಾಧ್ಯಕ್ಷರು

ಡಾ| ಡಿ. ವೀರೇಂದ್ರ ಹೆಗ್ಗಡೆಯವರು
ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ, ಗೌರವಾಧ್ಯಕ್ಷರು

ಶ್ರೀ ಸುದರ್ಶನ ಅತಿಕಾರಿ, ಕಾರ್ಯದರ್ಶಿ, ಆಡಳಿತ ಮಂಡಳಿ

ಪ್ರತಿಷ್ಠಾ ಮಹೋತ್ಸವ ಮತ್ತು ಮಹಾಮಸ್ತಕಾಭಿಷೇಕ ಸಮಿತಿ
ಅತಿಶಯ ಕ್ಷೇತ್ರ ಭಗವಾನ್ ಶ್ರೀ ಅನಂತನಾಥ ಸ್ವಾಮಿ ಬಸದಿ, ಶಿರ್ಲಾಲು

ಡಾ| ಮಹಾವೀರ್ ಜೈನ್, ಕೋಶಾಧಿಕಾರಿ

ವಿ.ಸೂ.: ಸಂದರ್ಭೋಚಿತವಾಗಿ ಪರಮಪೂಜ್ಯ ಭಟ್ಟಾರಕರುಗಳಿಂದ ಮಂಗಲ ಪ್ರವಚನ, ಧಾರ್ಮಿಕ ಸಭೆ, ಪಂಚಕಲ್ಯಾಣ ದೃಶ್ಯಾವಳಿಗಳು, ಭರತೇಶ ವೈಭವ ಕಾವ್ಯವಾಚನ, ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಪ್ರತಿದಿನ ಮಧ್ಯಾಹ್ನ ಸಂಘಸಂತರ್ಪಣೆ, ಸಂಜೆ ಉಪಾಹಾರ ಆತಿಥ್ಯಗಳು ನೆರವೇರಲಿದೆ.

ಸುಮುಖ ಗ್ರಾಫಿಕ್ಸ್ ಕಾರ್ಕಳ